Ganapti (Vighneshwara) Sandhi Harikathamrutasara In Kannada

ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ ಭಕ್ತರಿದನಾದರದಿ ಕೇಳುವುದು ||

ಶ್ರೀಶನಂಘ್ರಿಸರೋಜಭೃಂಗ ಮಹೇಶಸಂಭವ ಮನ್ಮನದೊಳು
ಪ್ರಕಾಶಿಸನುದಿನ ಪ್ರಾರ್ಥಿಸುವೆ ಪ್ರೇಮಾತಿಶಯದಿಂದ
ನೀ ಸಲಹು ಸಜ್ಜನರ ವೇದ ವ್ಯಾಸ ಕರುಣಾಪಾತ್ರ
ಮಹದಾಕಾಶಪತಿ ಕರುಣಾಳು ಕೈಪಿಡಿದೆಮ್ಮನುದ್ಧರಿಸು ||೧||

ಏಕದಂತ ಇಭೇಂದ್ರಮುಖ ಚಾಮೀಕರಕೃತಭೂಷಣಾಂಗ
ಕೃಪಾಕಟಾಕ್ಷದಿ ನೋಡು ವಿಜ್ಞಾಪಿಸುವೆನಿನಿತೆಂದು
ನೋಕನೀಯನ ತುತಿಸುತಿಪ್ಪ ವಿವೇಕಿಗಳ ಸಹವಾಸ ಸುಖಗಳ
ನೀ ಕರುಣಿಸುವುದೆಮಗೆ ಸಂತತ ಪರಮಕರುಣಾಳು ||೨||

ವಿಘ್ನರಾಜನೆ ದುರ್ವಿಷಯದೊಳು ಮಗ್ನವಾಗಿಹ ಮನವ ಮಹದೋ ಷಘ್ನ
ನಂಘ್ರಿಸರೋಜಯುಗಳದಿ ಭಕ್ತಿಪೂರ್ವಕದಿ
ಲಗ್ನವಾಗಲಿ ನಿತ್ಯಾನರಕಭಯಾಗ್ನಿಗಳಿಗಾನಂಜೆ ಗುರುವರ ಭಗ್ನಗೈಸೆನ್ನವಗುಣಗಳನು
ಪ್ರತಿದಿವಸದಲ್ಲಿ ||೩||
ಧನಪ ವಿಷ್ವಕ್ಸೇನ ವೈದ್ಯಾಶ್ವಿನಿಗಳಿಗೆ ಸರಿಯೆನಿಪ ಷಣ್ಮುಖನನುಜ ಶೇಷಶತಸ್ಥದೇವೋತ್ತಮ
ವಿಯದ್ಗಂಗಾ|
ವಿನುತ ವಿಶ್ವೋಪಾಸಕನೆ ಸನ್ಮನದಿ ವಿಜ್ಞಾಪಿಸುವೆ
ಲಕುಮೀವನಿತೆಯರಸನ ಭಕ್ತಿಜ್ಞಾನವ ಕೊಟ್ಟು ಸಲುಹುವುದು ||೪||

ಚಾರುದೇಷ್ಣಾಹ್ವಯನೆನಿಸಿ ಅವತಾರಮಾಡಿದೆ ರುಕ್ಮಿಣೀಯಲಿ
ಗೌರಿಯರಸನ ವರದಿ ಉದ್ಧಟರಾದ ರಾಕ್ಷಸರ|
ಶೌರಿಯಾಜ್ಞದಿ ಸಂಹರಿಸಿ ಭೂಭಾರವಿಳುಹಿದ ಕರುಣಿ
ತ್ವತ್ಪಾ ದಾರವಿಂದಕೆ ನಮಿಪೆ ಕರುಣಿಪುದೆಮಗೆ ಸನ್ಮತಿಯ||೫||

ಶೂರ್ಪಕರ್ಣ ವಿರಾಜಿತೇಂದುವ ದರ್ಪಹರ ಉದಿತಾರ್ಕ ಸನ್ನಿಭ
ಸರ್ಪವರ ಕಟಿಸೂತ್ರ ವೈಕೃತಗಾತ್ರ ಸುಚರಿತ್ರ|
ಸ್ವರ್ಪಿತಾಂಕುಶಪಾಶಕರ ಖಳ ದರ್ಪಭಂಜನ ಕರ್ಮಸಾಕ್ಷಿಗ
ತರ್ಪಕನು ನೀನಾಗಿ ತೃಪ್ತಿಯ ಬಡಿಸು ಸಜ್ಜನರ ||೬||

ಖೇಶಪರಮಸುಭಕ್ತಿಪೂರ್ವಕ ವ್ಯಾಸಕೃತಗ್ರಂಥಗಳನರಿತು
ಪ್ರಯಾಸವಿಲ್ಲದೆ ಬರೆದು ವಿಸ್ತರಿಸಿದೆಯೊ ಲೋಕದೊಳು|
ಪಾಶಪಾಣಿಯೆ ಪ್ರಾರ್ಥಿಸುವೆನುಪದೇಶಿಸೆನಗದರರ್ಥಗಳ
ಕರುಣಾಸಮುದ್ರ ಕೃಪಾಕಟಾಕ್ಷದಿ ನೋಡಿ ಪ್ರತಿದಿನದಿ||೭||
ಶ್ರೀಶನತಿನಿರ್ಮಲಸುನಾಭೀದೇಶವಸ್ಥಿತ ರಕ್ತಶೃಂಗಗ
ದಾಸುಶೋಭಿತಗಾತ್ರ ಲೋಕಪವಿತ್ರ ಸುರಮಿತ್ರ|

ಮೂಷಕಾಸುರ ವಾಹನ ಪ್ರಾಣಾವೇಶಯುತ ಪ್ರಖ್ಯಾತ
ಪ್ರಭು ಪೂರೈಸು ಭಕ್ತರು ಬೇಡಿದಿಷ್ಟಾರ್ಥಗಳ ಪ್ರತಿ ದಿನದಿ||೮||

ಶಂಕರಾತ್ಮಜ ದೈತ್ಯರಿಗತಿಭಯಂಕರಗತಿಗಳೀಯಲೋಸುಗ ಸಂಕಟಚತುರ್ಥಿಗನೆನಿಸಿ
ಅಹಿತಾರ್ಥಗಳ ಕೊಟ್ಟು|
ಮಂಕುಗಳ ಮೋಹಿಸುವೆ ಚಕ್ರಧರಾಂಕಿತನೆ ದಿನದಿನದಿ
ತ್ವತ್ಪದ ಪಂಕಜಗಳಿಗೆ ಎರಗಿ ಬಿನ್ನಯಿಸುವೆನು ಪಾಲಿಪುದು||೯||

ಸಿದ್ಧವಿದ್ಯಾಧರಗಣಸಮಾ ರಾಧ್ಯ ಚರಣಸರೋಜ
ಸರ್ವಸುಸಿದ್ಧಿದಾಯಕ ಶೀಘ್ರದಿಂದಾಲಿಪುದು ಬಿನ್ನಪವ|
ಬುದ್ಧಿವಿದ್ಯಾಜ್ಞಾನಬಲ ಪರಿಶುದ್ಧಭಕ್ತಿವಿರಕ್ತಿನಿರುತನ
ವದ್ಯನ ಸ್ಮೃತಿಲೀಲೆಗಳ ಸುಸ್ತವನ ವದನದಲಿ ||೧೦||

ರಕ್ತವಾಸದ್ವಯವಿಭೂಷಣ ಉಕ್ತಿಲಾಲಿಸು ಪರಮ
ಭಗವದ್ಭಕ್ತವರ ಭವ್ಯಾತ್ಮ ಭಾಗವತಾದಿಶಾಸ್ತ್ರದಲಿ|
ಸಕ್ತವಾಗಲಿ ಮನವು ವಿಷಯ ವಿರಕ್ತಿ ಪಾಲಿಸು ವಿದ್ವದಾದ್ಯ ವಿಮುಕ್ತನೆಂದೆನಿಸೆನ್ನ
ಭವಭಯದಿಂದ ಕರುಣದಲಿ ||೧೧||

ಶುಕ್ರಶಿಷ್ಯರ ಸಂಹರಿಪುದಕೆ ಶಕ್ರ ನಿನ್ನನು ಪೂಜಿಸಿದನು
ಉರುಕ್ರಮ ಶ್ರೀರಾಮಚಂದ್ರನು ಸೇತುಮುಖದಲ್ಲಿ|
ಚಕ್ರವರ್ತಿ ಧರ್ಮರಾಜನು ಚಕ್ರಪಾಣಿಯ ನುಡಿಗೆ ಭಜಿಸಿದ
ವಕ್ರತುಂಡನೆ ನಿನ್ನೊಳೆಂತುಂಟೋ ಈಶನನುಗ್ರಹವು||೧೨||

ಕೌರವೇಂದ್ರನು ನಿನ್ನ ಭಜಿಸದ ಕಾರಣದಿ ನಿಜಕುಲಸಹಿತ
ಸಂಹಾರವೈದಿದ ಗುರುವರ ವೃಕೋದರನ ಗದೆಯಿಂದ|
ತಾರಕಾಂತಕನನುಜ ಎನ್ನ ಶರೀರದೊಳು ನೀನಿಂತು ಧರ್ಮ
ಪ್ರೇರಕನು ನೀನಾಗಿ ಸಂತೈಸೆನ್ನ ಕರುಣದಲಿ||೧೩||

ಏಕವಿಂಶತಿ ಮೋದಕಪ್ರಿಯ ಮೂಕರನು ವಾಗ್ಮಿಗಳ ಮಾಳ್ಪ
ಕೃಪಾಕರೇಶ ಕೃತಜ್ಞ ಕಾಮದ ಕಾಯೊ ಕೈವಿಡಿದು|
ಲೇಖಕಾಗ್ರಣಿ ಮನ್ಮನದ ದುರ್ವ್ಯಾಕುಲವ ಪರಿಹರಿಸು ದಯದಿ ಪಿನಾಕಿಭಾರ್ಯಾತನುಜ
ಮೃದ್ಭವ ಪ್ರಾರ್ಥಿಸುವೆ ನಿನ್ನ||೧೪||

ನಿತ್ಯಮಂಗಲಚರಿತ ಜಗದುತ್ಪತ್ತಿಸ್ಥಿತಿಲಯನಿಯಮನ
ಜ್ಞಾನತ್ರಯಪ್ರದ ಬಣ್ಣಿಸೆಚಕ ಸುಮನಸಾಸುರರ |
ಚಿತ್ತವೃತ್ತಿಗಳಂತೆ ನಡೆವ ಪ್ರಮತ್ತನಲ್ಲ ಸುಹೃಜ್ಜನಾಪ್ತನ
ನಿತ್ಯದಲಿ ನೆನೆನೆನೆದು ಸುಖಿಸುವ ಭಾಗ್ಯ ಕರುಣಿಪುದು||೧೫||
ಪಂಚಭೇದಜ್ಞಾನವರುಪು ವಿರಿಂಚಿಜನಕನ ತೋರು ಮನದಲಿ
ವಾಂಛಿತಪ್ರದ ಒಲುಮೆಯಿಂದಲಿ ದಾಸನೆಂದರಿದು|
ಪಂಚವಕ್ತ್ರನ ತನಯ ಭವದೊಳು ವಂಚಿಸದೆ ಸಂತಯಿಸು ವಿಷಯದಿ ಸಂಚರಿಸಂದದಲಿ
ಮಾಡು ಮನಾದಿಕರಣಗಳ||೧೬||

ಏನು ಬೇಡುವುದಿಲ್ಲ ನಿನ್ನ ಕುಯೋನಿಗಳು ಬರಲಂಜೆ ಲಕ್ಷ್ಮೀ
ಪ್ರಾಣಪತಿತತ್ತ್ವೇಶರಿಂದೊಡಗೂಡಿ ಗುಣಕಾರ್ಯ|
ತಾನೆ ಮಾಡುವನೆಂಬ ಈ ಸುಜ್ಞಾನವೆ ಕರುಣಿಸುವುದೆಮಗೆ
ಮಹಾನುಭಾವ ಮುಹುರ್ಮುಹು ಪ್ರಾರ್ಥಿಸುವೆನಿನಿತೆಂದು||೧೭||

ನಮೋ ನಮೋ ಗುರುವರ್ಯ ವಿಬುಧೋತ್ತಮ ವಿವರ್ಜಿತನಿದ್ರಕಲ್ಪ
ದ್ರುಮನೆನಿಪೆ ಭಜಕರಿಗೆ ಬಹುಗುಣಭರಿತ ಶುಭಚರಿತ|
ಉಮೆಯ ನಂದನ ಪರಿಹರಿಸಹಂ ಮಮತೆ ಬುದ್ಧ್ಯಾದಿಂದ್ರಿಯ
ಗಳಾ ಕ್ರಮಿಸಿ ದಣಿಸುತಲಿಹವು ಭವದೊಳಗಾವಕಾಲದಲಿ ||೧೮||

ಜಯಜಯತು ವಿಘ್ನೇಶ ತಾಪ ತ್ರಯವಿನಾಶನ ವಿಶ್ವಮಂಗಳ
ಜಯಜಯತು ವಿದ್ಯಾಪ್ರದಾಯಕ ವೀತಭಯಶೋಕ|
ಜಯಜಯತು ಚಾರ್ವಾಂಗ ಕರುಣಾನಯನದಿಂದಲಿ ನೋಡಿ
ಜನ್ಮಾಮಯಮೃತಿಗಳನು ಪರಿಹರಿಸು ಭಕ್ತರಿಗೆ ಭವದೊಳಗೆ||೧೯||

ಕಡುಕರುಣಿ ನೀನೆಂದರಿದು ಹೇರೊಡಲ ನಮಿಸುವೆ ನಿನ್ನಡಿಗೆ
ಬೆಂಬಿಡದೆ ಪಾಲಿಸು ಪರಮ ಕರುಣಾಸಿಂಧು ಎಂದೆಂದು|
ನಡುನಡುವೆ ಬರುತಿಪ್ಪ ವಿಘ್ನವ ತಡೆದು ಭಗವನ್ನಾಮಕೀರ್ತನೆ
ನುಡಿನುಡಿಗೆ ಎನ್ನಿಂದ ಪ್ರತಿದಿವಸದಲಿ ಮರೆಯದಲೆ||೨೦||

ಏಕವಿಂಶತಿ ಪದಗಳೆನಿಸುವ ಕೋಕನದ ನವಮಾಲಿಕೆಯ
ಮೈನಾಕಿತನಯಾಂತರ್ಗತ ಶ್ರೀಪ್ರಾಣಪತಿಯೆನಿಪ|
ಶ್ರೀಕರಜಗನ್ನಾಥವಿಠ್ಠಲ ಸ್ವೀಕರಿಸಿ ಸ್ವರ್ಗಾಪವರ್ಗದಿ
ತಾ ಕೊಡುವ ಸೌಖ್ಯಗಳ ಭಕುತರಿಗಾವ ಕಾಲದಲಿ||೨೧||

Ganapti (Vighneshwara) Sandhi Harikathamrutasara In English

Harikathamrutasara gurugala
Karunadindapanitu peluve
Parama bhagavadbhaktaridanadaradi keluvudu

Shrishanamghri sarojabhrunga ma
Heshasambhava manmanadolu pra
Kashisanudina prarthisuve prematishayadinda
Ni salahu sajjanara veda
Vyasa karunapatra mahada
Kashapati karunalu kaipididemmanuddharisu||1||

Ekadanta ibhendramukha cha
Mikarakruta bhushananga kru
Pa kathashaadi nodu vignanapisuveninitendu
Nokaniyana tutisutippa vi
Vekigala sahavasa sukhagala
Ni karunisuvudemage santata paramakarunalu||2||

Vighnarajane durvishayadolu
Magnavagiha manavu mahado
Shaghnanghri sarojayugaladi bhaktipurvakadi
Lagnavagali nitya naraka bha
Yagnigaligananje guruvara
Bhagnagaisennavagunagalanu pratidivasadalli||3||

Dhanapa vishvaksena vaidya
Shvinigalige sariyenipa shanmukha
Nanuja sheshashatastha devottamma viyadganga
Vinuta vishvopasakane sa
Nmanadi vignanapisuve lakumi
Vaniteyarasana bhaktijnanava kottu saluhuvudu||4||

Charudeshnahvayanenisi ava
Tara madide rukminiyali
Gouriyarasana varadi uddhatarada rakshaasara
Shouriyajnanadi samharisi bhu
Bharaviluhida karuni tvatpa
Daravindake namipe karunipudemage sanmatiya||5||

Shurpakarnadvaya virajita kam
Darpashara uditarkasannibha
Sarpavara katisutra vaikruitagatra sucharitra
Svarpitankusha pashakara khala
Darbhanjana karmasakshiiga
Tarpakanu ninagi truptiya padisu sajjanara||6||

Khesha parama subhaktipurvaka
Vyasakruta granthagalanaritu pra
Yasavillade baredu vistarisideyo lokadolu
Pashapaniye prarthisuvenupa
Deshisenagadararthagala karu
Nasamudra krupakatakshaadi noduva pratidinadi||7||

Shrishanatinirmala sunabhi
Deshavasthita rakta gandha
Tishobhitagatra lokapavitra suramitra
Mushakasuvaravahana prana
Veshayuta prakhyata prabhu pu
Raisu bhaktaru bedidishtarthagala prati dinadi||8||

Shankaratmaja daityarigati bha
Yankaragatigaliya losuga
Sankata chaturthiganenisi ahitarthagala kottu
Mankugala mohisuve chakrada
Rankitana dinadinadi tvatpada
Pankajagalige binnaisuvenu palipudu emma||9||

Siddha vidyadharagana sama
Radhya charanasaroja sarvasu
Siddhidayaka shighradim palipudu binnapava
Buddhi vidya jnana bala pari
Shuddha bhakti virakti nirutana
Vadyana smrutililegala sustavana vadanadali||10||

Raktavasadvaya vibhushana
Ukti lalisu paramabhagava
Dbhaktavara bhavyatma bhagavatadishastradali
Saktavagali manavu vishaya
Virakti palisu vidhvadhadhya vi
Muktanendenisenna bhavabhayadindalanudunadi||11||

Shukra shishyara samharipudake
Shakra ninnanu pujisidanu u
Rukrama shriramachandranu setumukhadalli
Chakravartipa dharmarajanu
Chakrapaniya nudige bhajisida
Vakratundane ninnolentuto Ishanugrahavu||12||

Kouravendranu ninna bhajisada
Karanadi nijakula sahita sam
Hara aidida guruvara vr^ikodarana gadeyinda
Tarakantakananuja enna
Shariradolu ninintu dharma
Prerakanu ninagi santaisenna karunadali||13||

Ekavimshati modaka priya
Mukaranu vagnangnigala malpe kru
Pakaresha kruitajnana kamada kayo kaipididu
Lekhakagrani manmanada du
Rvyakulava pariharisu dayadi pi
Naki bharya tanuja mrudbhava prarthisuve ninna||14||

Nitya mangala charita jagadu
Tpattisthiti laya niyamana jnana
Natrayapada bandhamochaka sumanasasura
Chittavruittigalante nadeva pra
Mattanalla suhrujjanaptana
Nityadali nenenenedu sukhisuva bhagya karunipudu||15||

Panchabheda jnanavarupu vi
Rinchijanakana toru manadali
Vanchitaprada olumeyimdali dasanendaridu
Panchavaktrana tanaya bhavadolu
Vanchisade santaisu vishayadi
Sancharidandadali madu manadikaranagala||16||

Enu beduvudilla ninna ku
Yonigalu baralanje lakumi
Pranapati tatvesharindodagudi gunakarya
Tane maduvanenba I su
Jnanavane karunisuvudemage ma
Hanubhava muhurmuhuh prarthisuveninitendu||17||

Namo namo guruvarya vibudho
Ttama vivarjitanidra kalpa
Drumanenipe bhajakarige bahugunabharita shubhacharita
Umeya nandana pariharisa
Hanmamate buddhyadin driyagala
Kramisi danisutalihavu bhavadolagava kaladali||18||

Jayajayatu vighnesha tapa
Trayavinashana vishvamangala
Jayajayatu vidyapradayaka vitabhayashoka
Jayajayatu charvanga karuna
Nayanadindali nodi januma
Maya mrutigalanu pariharisu bhaktarige bhavadolage||19||

Kadukaruni ninendaridu he
Rodala namisuve ninnadige bem
Bidade palisu parama karunasindhu endendu
Nadu naduve barutippa vighnava
Tadedu bhagavannama kirtane
Nudidu nudisenninda prati divasadali mareyadale||20||

Ekavimshati padagalenisuva
Kokanada navamalikeya mai
Nakitanayantargata shripranapatiyenipa
Shrikara jagannathavitthala
Svikarisi svargapavargadi
Ta koduva soukhyagala bhaktarigava kaladali||21||

For More Lyrics, visit:https://holagi.in